ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 11 ನೇ ಮಾರ್ಚ್, 2020

ಕಂದಾಯ ಜಾಗದ ನಿವೇಶನಗಳ ನೋಂದಣಿಯನ್ನು ನಿಲ್ಲಿಸಿರುವ ಕುರಿತು

ಶ್ರೀಹೆಚ್.ಎಂ.ರಮೇಶ್‌ಗೌಡ(ವಿಧಾನಸಭೆಯಿಂದಚುನಾಯಿತರಾದವರು) :-

634 (817) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರವು ಏಕಾಏಕಿ ಕಂದಾಯ ಜಾಗದ ನಿವೇಶನಗಳ ನೋಂದಣಿಯನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಇದರಿಂದ ಸಾಮಾನ್ಯ ಬಡಕುಟುಂಬದ ಜನರಿಗೆ ತೊಂದರೆಯಾಗುತ್ತಿರುವ Åದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸಾಮಾನ್ಯ ಬಡಕುಟುಂಬದ ಜನರು ಒಪ್ಪಂದ ಕರಾರು ಮಾಡಿಕೊಂಡಿದ್ದು, ಇವರಿಗೆ ನೋಂದಣಿಯು ಇಲ್ಲದೇ ಮತ್ತು ಮಾಲೀಕರಿಂದ ಒಪ್ಪಂದ ಕರಾರು ಮಾಡಿಕೊಂಡಿರುವ ಹಣವು ಇಲ್ಲದೆ ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಕೆಲವು ದಿನಗಳ ಗಡವುಗಳನ್ನು ನೋಂದಣಿ ಮಾಡಿಸಿಕೊಳ್ಳುವಂತೆ ಸರ್ಕಾರವು ಕ್ರಮಗಳೇನಾದರೂ ಕೈಗೊಂಡಿದೆಯೇ ; ಅದರಂತೆ, ನಿವೇಶನ ಒಪ್ಪಂದ ಕರಾರು ಹಣವನ್ನು ಒಪ್ಪಂದ ಮಾಡಿಕೊಂಡ ಜನ ಸಾಮಾನ್ಯರಿಗೆ ದೊರಕಿಸಿಕೊಡುವಂತೆ ಸರ್ಕಾರವು ಮಾಲೀಕರಿಗೆ ಸೂಚನೆ ನೀಡಿದೆಯೇ ; ನೀಡಿದ್ದಲ್ಲಿ, ಕಾಲಮಿತಿ ಎಷ್ಟು ;

(ಈ) ಮುಂಬರುವ ದಿನಗಳಲ್ಲಿ ಈ ರೀತಿ ತೊಂದರೆಗಳಾಗದಂತೆ ಸರ್ಕಾರವು ಕೈಗೊಂಡಿರುವ ಕಾರ್ಯಯೋಜನೆಗಳೇನು ? (ಪೂರ್ಣ ವಿವರ ನೀಡುವುದು)